# ಮೆಟ್ರೋ ಮೊಗಸಾಲೆಯಲ್ಲಿ ವ್ಯಂಗ್ಯ ಭಾವಚಿತ್ರಗಳ ಮೆರವಣಿಗೆ





ಪೋರ್ಚುಗಲ್ ರಾಜಧಾನಿ ಲಿಸ್ಬನ್‌ನ ಮೆಟ್ರೋ ನಿಲ್ದಾಣದ ಮೊಗಸಾಲೆಯಲ್ಲಿ ಕ್ಯಾರಿಕೇಚರ್‌ಗಳ ಮೆರವಣಿಗೆ ಎದುರಾಗುತ್ತದೆ. ಈ ವ್ಯಂಗ್ಯ ಭಾವಚಿತ್ರಗಳು ತುಟಿಯಂಚಲ್ಲಿ ನಗು ತುಳುಕಿಸುವುದರ ಜೊತೆಗೆ, ವಕ್ರರೇಖೆಗಳ ಹಿಂದಿನ ಬೃಹತ್ತನ್ನು, ಆಂಟೋನಿಯೋ ಎನ್ನುವ ಅಪೂರ್ವ ಕಲಾವಿದನ ಮಹತ್ತನ್ನೂ ಮನಗಾಣಿಸುವಂತಿವೆ.

■ **ಡಾ. ಜೆ. ಬಾಲಕೃಷ್ಣ**

ನಾವು ಪೋರ್ಚುಗಲ್ ಮತ್ತು ಸ್ಪೇನ್ ಪ್ರವಾಸ ಹೊರಟಿದ್ದೆವು. ನಮ್ಮ ಪ್ರವಾಸ ಪೋರ್ಚುಗಲ್ ರಾಜಧಾನಿ ಲಿಸ್ಬನ್‌ನಿಂದ ಆರಂಭವಾಗುತ್ತಿತ್ತು. ಲಿಸ್ಬನ್‌ನ ವಿಮಾನ ನಿಲ್ದಾಣದಿಂದ ಹೊರಬಂದೊಡನೆಯೇ ಪಕ್ಕದಲ್ಲಿ ಮೆಟ್ರೋ ಸ್ಟೇಷನ್ ಇದ್ದು, ಅಲ್ಲಿಂದ ನಾವು ಹೋಗಬೇಕಾಗಿದ್ದ ಹೋಟೆಲಿಗೆ ಹೊರಡಲು ಏರ್‌ಪೋರ್ಟ್ ಮೆಟ್ರೋ ಸ್ಟೇಷನ್ ಪ್ರವೇಶಿಸಿದೆವು. ಎಲಿವೇಟರ್ ಇಳಿದು ಕಾರಿಡಾರ್ ಪ್ರವೇಶಿಸುತ್ತಿರುವಂತೆಯೇ ವ್ಯಂಗ್ಯಚಿತ್ರಕಾರನಾಗಿರುವ ನನಗೆ ಅಚ್ಚರಿ ಕಾದಿತ್ತು. ಕಾರಿಡಾರ್‌ನ ಎರಡೂ ಬದಿಯಲ್ಲಿ ಕಪ್ಪುಬಿಳುಪಿನ ಕ್ಯಾರಿಕೇಚರ್ (ವ್ಯಂಗ್ಯ ಭಾವಚಿತ್ರಗಳು) ಇದ್ದವು.

ನಾನು ಮೆಟ್ರೋ ಸ್ಟೇಷನ್ ಮತ್ತು ಇತರೆಡೆಗಳಲ್ಲಿ ಹಲವಾರು ರೀತಿಯ ಕಲಾಕೃತಿಗಳನ್ನು ನೋಡಿದ್ದೇನೆ. ಆದರೆ ಈ ರೀತಿಯ ‘ಶಾಶ್ವತ’ ವ್ಯಂಗ್ಯಚಿತ್ರಗಳನ್ನು ನೋಡಿದ್ದು ಅದು ಮೊದಲಬಾರಿ. ವ್ಯಂಗ್ಯಚಿತ್ರಕಾರರನ್ನೂ ಇತರ ಕಲಾವಿದರಂತೆ ಗುರುತಿಸಿ, ವ್ಯಂಗ್ಯಚಿತ್ರ ಕಲೆಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಹೆಮ್ಮೆಯಿಂದ ಪ್ರದರ್ಶಿಸಿ ಇತರ ಕಲೆಗಳ ಗೌರವ ಸ್ಥಾನ ಕೊಡುವಂತೆ ಕೊಟ್ಟಿರುವುದು ಕಂಡು ಸಂತೋಷವಾಯಿತು. ಇದೇ ರೀತಿ ವ್ಯಂಗ್ಯಚಿತ್ರಗಳಿಗೆ ಸಾರ್ವಜನಿಕ ಸ್ಥಳಗಳಲ್ಲಿ ಗೌರವ ನೀಡುವ ಕಾರ್ಯ ಇತರ ದೇಶಗಳಲ್ಲೂ ಅನುಸರಿಸಲಾಗುತ್ತಿದೆ. ಮಲೇಷ್ಯಾದ ಪೀನಾಂಗ್ ದ್ವೀಪದಲ್ಲಿನ ಜಾರ್ಜ್‌ಟೌನ್ ವಿಶ್ವಸಂಸ್ಥೆಯ ಯುನೆಸ್ಕೊ ಪಾರಂಪರಿಕ ಸ್ಥಳವೆಂದು ಗುರುತಿಸಲ್ಪಟ್ಟಿದ್ದು ಅದರ ನೆನಪಿಗಾಗಿ ಅದರ ಪ್ರಮುಖ ರಸ್ತೆಗಳಲ್ಲಿ ಆ ಊರಿನ, ರಸ್ತೆಯ ಮಾಹಿತಿಯನ್ನು ನೀಡುವ ಕಬ್ಬಿಣದ ಸರಳುಗಳಿಂದ ನಿರ್ಮಿಸಿದ 53 ವ್ಯಂಗ್ಯಚಿತ್ರಗಳನ್ನು ನಾಡಿನ ಹೆಸರಾಂತ ವ್ಯಂಗ್ಯಚಿತ್ರಕಾರರಿಂದ ರಚಿಸಿ ಸ್ಥಾಪಿಸಿದ್ದಾರೆ.

ಲಿಸ್ಬನ್‌ನ ಏರ್‌ಪೋರ್ಟ್ ಮೆಟ್ರೋ ಸ್ಟೇಷನ್‌ನಲ್ಲಿ 52 ವ್ಯಂಗ್ಯ ಭಾವಚಿತ್ರಗಳಿವೆ. ಅವುಗಳನ್ನು